ಅಲ್ಲಿ ಶಾಂತಿ ಭಂಗವಾಗಿದೆ. ಆದಕಾರಣ ದಯವಿಟ್ಟು ಸರ್ಕಾರದವರು ಮಧ್ಯ ಪ್ರವೇಶ ಮಾಡಿ, ತಹಸೀಲ್ದಾರರನ್ನು ಕಾರ್ಯದರ್ಶಿ ಮಾಡುವುದರ ಮೂಲಕ, ಸರ್ಕಾರಕ್ಕೆ ಬರತಕ್ಕಂಥ ರಾಯಲ್ಟಿ ಪಡೆದುಕೊಂಡು ಆ ಗ್ರಾಮದ ಅಭಿವೃದ್ಧಿಗೋಸ್ಕರ ಆ ಹಣ ಉಪಯೋಗ ಮಾಡತಕ್ಕಂಥ ಕೆಲಸ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) : ಆ ಹಳ್ಳಿಗಳು ಮುಳುಗಿಪೆ ಆಗಿರತಕ್ಕಂಥದ್ದರ ಬಗ್ಗೆ ಫೈಲ್ ತರಿಸಿ ಆದಷ್ಟು ಬೇಗ ಪರಿಹಾರ ಕೊಡಿಸುತ್ತೇನೆ.

ಇನ್ನೊಂದು ವಿಷಯವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಆ ಶಿಂಷಾ ನದಿಯ ಮರಳನ್ನು ಕಾಯಿದೆ ಪ್ರಕಾರ ಲೈಸನ್ಸ್ ತೆಗೆದುಕೊಂಡು ಲೈಸನ್ಸ್‌ದಾರರು ಅದನ್ನು ಸಾಗಾಣಿಕೆ ಮಾಡುತ್ತಿದ್ದಾರೆ. ಅವರು ಹೇಳಿದ್ದುದು ನಿಜ ಇದೆ. ನಮ್ಮ ಶಿಂಷಾ ಬಾರ್ಡರಸಲ್ಲಿ ಮರಳು ಸಾಗಿಸುವಾಗ ಹಲವರು ಮರಳಿನ ಲಾರಿಗಳನ್ನು ಹಿಡಿದುಕೊಂಡು ಅವರಿಗೆ ತಗಾದೆಗಳನ್ನು ಮಾಡಿ ಹಲವಾರು ಕಡೆ ಲಾರಿಗಳನ್ನು ಬಿಟ್ಟಿಲ್ಲ. ಆದರೆ ಅವರು ಕಾಯಿದೆ ಪ್ರಕಾರ ಲೈಸನ್ಸ್ ತೆಗೆದುಕೊಂಡು ಮರಳನ್ನು ಸಾಗಾಣಿಕೆ ಮಾಡುತ್ತಿದ್ದಾರೆ. ಆದರೆ ಇದು ಸ್ಥಳೀಯವಾದ ಸಮಸ್ಯೆ ಇದ್ದುದರಿಂದ ನಾನು ಕೂಡಲೇ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳೊಂದಿಗೆ ಮಾತನಾಡಿ ಮಾನ್ಯ ಪುಟ್ಟಣ್ಣಯ್ಯನವರಿಗೆ ಮತ್ತು ಅಲ್ಲಿರತಕ್ಕಂಥ ಗ್ರಾಮ ಪಂಚಾಯತ್‌ನವರಿಗೆ ಕರೆಸಿ, ಸಭೆ ನಡೆಸಿ ಏನು ಪರಿಹಾರ ಹುಡುಕಬೇಕೋ ಆ ಗ್ರಾಮಕ್ಕೆ ಅನುಕೂಲವಾಗುವುದಕ್ಕೆ, ಯಾವ ರೀತಿ ಹಣ ಸಹಾಯ ಮಾಡಬೇಕು ಎನ್ನುವುದರ ಬಗ್ಗೆ ಪ್ರಯತ್ನ ಮಾಡುತ್ತೇನೆ.

**(ಈ) ಮಂಗಳೂರಿನಲ್ಲಿರುವ ವೆನಲಾಕ್ ಹಾಗೂ ಲೇಡಿ ಘೋಷನ್ ಆಸ್ಪತ್ರೆಗಳಲ್ಲಿ ವಸೂಲಾದ ಮೆಡಿಕಲ್ ಫೀ.**

ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ ಅನೇಕ ಅಭಿವೃದ್ಧಿ ಚಟುವಟಿಕೆಗಳು, ಆರ್ಥಿಕ ಸುವ್ಯವಸ್ಥೆ ಇಲ್ಲದೆ ತೊಂದರೆ ಆಗುವಂಥದ್ದು ನಮ್ಮ ಗಮನದಲ್ಲಿದೆ. ಆದರೆ ಅಲ್ಲಿ ಒಂದು ವಿಶಿಷ್ಟ ಪರಿಸ್ಥಿತಿ ಇದೆ. ಮಂಗಳೂರಿನಲ್ಲಿರುವಂಥ ವೆನಲಾಕ್ ಆಸ್ಪತ್ರೆ, ಮತ್ತು ಲೇಡಿ ಘೋಷನ್ ಆಸ್ಪತ್ರೆಗಳು ಜಿಲ್ಲಾ ಆಸ್ಪತ್ರೆಗಳು. ಅವುಗಳಿಗೆ ಸಂಬಂಧಪಟ್ಟಂಥ ಕೆ.ಎಂ.ಸಿ. ಅಥವಾ ಇನ್ನು ಇತರ ಕಾಲೇಜುಗಳ ಮೂಲಕ ಮೆಡಿಕಲ್ ಫೀಸ್ ಎಂದು ಹೇಳಿ ಸುಮಾರು ಕೋಟಿ ರೂ. ಸಂಗ್ರಹವಾಗಿದೆ. ಕಳೆದ ಒಂದು ವರ್ಷದಿಂದ ಅದನ್ನು ವಿನಿಯೋಗ ಮಾಡಲಿಕ್ಕೆ ಆಗಲಿಲ್ಲ. ಅದು ಕಟ್ಟಡದ ಉಪಯೋಗಕ್ಕಾಗಲಿ, ವೈದ್ಯಕೀಯ ಉಪಕರಣಗಳ ಖರೀದಿಗೋಸ್ಕರ ಇರಲಿ ಅಥವಾ ಒಂದು ಸಮಗ್ರ ಅಭಿವೃದ್ಧಿಗೋಸ್ಕರ ಅದನ್ನು ಬಿಡುಗಡೆ ಮಾಡಿ, ಮತ್ತು ಅದಕ್ಕೆ ಪರ್ಮಿಶನ್ ಕೊಡಿ ಎಂದು ಹೇಳಿದರೆ ಆ ಕಡತ ಒಂದು ವರ್ಷದಿಂದ ಅಲ್ಲೇ ಕೊಳೆಯುತ್ತಿದೆ. ಯಾವುದೇ ರೀತಿಯಾದ ತೀರ್ಮಾನಕ್ಕೆ ಬರುವುದಕ್ಕೆ ನಮ್ಮ ಅಧಿಕಾರಿಗಳಿಗೆ ಸಾಧ್ಯವಾಗಲಿಲ್ಲ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರನ್ನು ನಾನು ಪ್ರತ್ಯಕ್ಷವಾಗಿ ಅಲ್ಲಿ ಕರೆದುಕೊಂಡು ಹೋಗಿ ಅವರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಆದಕಾರಣ ತಕ್ಷಣ ಅದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ.

ಇನ್ನು ಕಳೆದ ಆರು ವರ್ಷದಿಂದ ಬೋರ್ಡ್ ಆಫ್ ವಿಸಿಟರ್ಸ್ ಕಮಿಟಿ ಆಲ್ಲಿ ಮಾಡಲಿಲ್ಲ. ಆರು ವರ್ಷಗಳಿಂದ ಆಲ್ಲಿ ಉಸ್ತುವಾರಿ ಸಮಿತಿಯನ್ನು ಕೂಡ ಮಾಡಲು ಸಾಧ್ಯವಾಗುತ್ತಿಲ್ಲ. ಅದನ್ನು ಮಾಡಿದರೆ ಸರ್ಕಾರದ ಮೇಲೆ ಆರ್ಥಿಕ ಹೊರೆ ಬೀಳುವುದಿಲ್ಲ. ಆದ್ದರಿಂದ ಬೋರ್ಡ್ ಆಫ್ ವಿಸಿಟರ್ಸ್ ಕಮಿಟಿಯನ್ನು ತಕ್ಷಣ ಮಾಡಬೇಕೆಂದು ತಾವು ಸರ್ಕಾರಕ್ಕೆ ಆದೇಶ ನೀಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

+ಡಾ. ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಆಧ್ಯಕ್ಷರೆ, ನಾನು ಹೋದ ವಾರದಲ್ಲಿ ಮಾನ್ಯ ಶಾಸಕ ಮಿತ್ರರ ಜೊತೆ ಆ ಆಸ್ಪತ್ರೆ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಸ್ವಲ್ಪ ಅಡ್ಮಿನಿಸ್ಟ್ರೇಟಿವ್ ಹರ್ಡಲ್ಸ್ ಇದೆ. ಅಲ್ಲಿಯ ಆಸ್ಪತ್ರೆಗೆ ಬಜೆಟ್ ಕೊಡತಕ್ಕಂಥದ್ದು ಮೆಡಿಕಲ್ ಎಜುಕೇಶನ್‌ನಿಂದ, ಆದರೆ ಅಡ್ಮಿನಿಸ್ಟ್ರೇಶನ್ ಇರತಕ್ಕಂಥದ್ದು ಆರೋಗ್ಯ ಇಲಾಖೆಯಲ್ಲಿ. ನಮ್ಮ ಜಿಲ್ಲಾ ಸುಪರಿಂಟೆಂಡೆಂಟ್, ಪ್ರಾಂಶುಪಾಲರುಗಳು, ಕಾರ್ಯದರ್ಶಿಗಳು ಹಾಗೂ ನಾವು ಇಬ್ಬರು ಸಚಿವರು ಒಂದು ಸಭೆಯನ್ನು ನಾಳೆ ಕರೆದಿದ್ದೇವೆ. ಯಾರು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡು ಒಂದ ವಾರದೊಳಗೆ ಬಿರ್ಜುಮಾಡಲಿಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ.

ಆಧ್ಯಕ್ಷರು : ಸದಾನಂದಗೌಡರೆ, ತಾವು ಕೋರ್ಟ್ ವಿಚಾರದ ಬಗ್ಗೆ ಪ್ರಸ್ತಾಪ ಮಾಡಲು ಸಮಯ ಕೇಳಿದ್ದೀರಿ, ಆದರ ಬಗ್ಗೆ ಮೇಡಮ್‌ರವರು ಕೂಡ ಪ್ರಸ್ತಾಪ ಮಾಡಲಿಚ್ಛಿಸಿದ್ದಾರೆ. ಇವರು ಬಾ ಹಿರಿಯ ನ್ಯಾಯವಾದಿಗಳು, ಬೆಂಗಳೂರಿಗೆ ಸಂಬಂಧಿಸಿದವರು, ಬೆಂಗಳೂರಿನಲ್ಲಿ ಗಲಾಟೆಯಾಗುತ್ತಿರ ಆದಕಾರಣ ಇಬ್ಬರದೂ ಒಂದೇ ವಿಚಾರ ಇರುವುದರಿಂದ ತಾವು ಸ್ವಲ್ಪ ಆವರಿಗಾಗಿ ಈಲ್ಡ್ ಆಗಿ.

**(ಉ) ವಕೀಲರು ರೆಕಾರ್ಡ್ಸ್ ತೋರಿಸಿದಾಗ ಕೇಸ ಡೇಟ್ ಕೊಡಲಿಲ್ಲ ಎಂದ ರೂಲರ್ ತೆಗೆದುಕೊಂಡು ವಕೀಲರಿಗೆ ಹೊಡೆದಿರುವುದು.**

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಆಧ್ಯಕ್ಷರೆ, ಸಣ್ಣ ಒಂದು ಕ್ಷುಲ್ಲಕ ವಿಷಯದಿಂದ ಇವೊ ಇಡೀ ಕರ್ನಾಟಕದಲ್ಲಿ ಯಾವುದೇ ಕೋರ್ಟು ನಡೆಯದೇ ಇರತಕ್ಕಂಥ ಪರಿಸ್ಥಿತಿ ಒದಗಿ ಬಂದಿದೆ. ಒ ವಕೀಲರು ರೆಕಾರ್ಡ್ಸ್ ತೋರಿಸಿದಾಗ ಕೇಸ್ ಡೇಟ್ ಕೊಡಲಿಲ್ಲ ಎಂದು ಹೇಳಿ ಒಬ್ಬ ಕ್ಲರ್ಕ್ ರೂಲರ್ ತೆಗೆದುಕೊಂಡು ವಕೀಲರಿಗೆ ಹೊಡೆದರು ಎಂದು ಕಂಪ್ಲೇಂಟ್ ಆಗಿದೆ. ಕಂಪ್ಲೇಂಟ್ ಆದ ನಂತ ಅಲ್ಲಿರತಕ್ಕಂಥ ಡಿಸ್ಟ್ರಿಕ್ಟ್ ಜಡ್ಜ್ ಆ ಕ್ಲರ್ಕ್‌ನ್ನು ಸಸ್ಪೆಂಡ್ ಮಾಡಿದರು. ಸಸ್ಪೆಂಡ್ ಆದ ನಂತ ವಕೀಲರೆಲ್ಲರು ಕೆಲಸ ಮಾಡುತ್ತಿದ್ದರು, ನೀವು ಸಸ್ಪೆಂಡ್ ಮಾಡಿದ್ದು ತಪ್ಪು ಎಂದು ಹೇಳಿ ಅಲ್ಲಿರತಕ್ಕಂ ಕ್ಲರ್ಕ್‌ಗಳು ಹೋದಾಗ ಆ ನ್ಯಾಯವಾದಿಗಳು ಆ ಸಸ್ಪೆನ್‌ಶನ್‌ನ್ನು ರದ್ದು ಪಡಿಸಿದರು. ಆ ರದ್ದುಪಡಿಸಿದ ನಂತರ ನಿನ್ನೆ ದಿವಸ ಇಡೀ ವಕೀಲವೃಂದ ಮತ್ತು ಕ್ಲರ್ಕ್‌ಗಳು ಕೋರ್ಟಿನಲ್ಲಿ ಕೆಲ ಮಾಡಲಿಲ್ಲ. ಒಂದು ಪ್ರೊಸೆಶನ್‌ನ್ನು ಹೈಕೋರ್ಟಿಗೆ ತೆಗೆದುಕೊಂಡು ಬಂದರು. ನ್ಯಾಯಮೂರ್ತಿಗಳು ಹೈಕೋರ್ಟಿನಲ್ಲಿ ಚೀಫ್ ಜಸ್ಟಿಸ್‌ಮತ್ತು ಇತರ ಜಡ್ಜ್‌ಗಳ ಮುಂದೆ ನಾನೂ ಕೂಡ ಹೋಗಿದ್ದೆ, ಹೋ ನಂತರ ಅದಕ್ಕೆ ಐದು ಜಡ್ಜಸ್ ಕಮಿಟಿ ಮಾಡಿ ಇದರ ತೀರ್ಮಾನ ಆ ಕಮಿಟಿ ತೆಗೆದುಕೊಳ್ಳುತ್ತದೆ ನೀ ನಿಮ್ಮ ನಿರ್ಣಯವನ್ನು ಹಿಂತೆಗೆದುಕೊಳ್ಳಿ ಎಂದು ಹೇಳಿದರು. ಈ ನಿರ್ಣಯ ಸಾಯಂಕಾಲ ಐ